ಓ.ಎಸ್.122/2023
ಡಿ.ಡಬ್ಲು-1/ಪ್ರಸನ್ನಕುಮಾರ್

**ದಿ: 03.06.2026 ರಂದು 1ನೇ ಪ್ರತಿವಾದಿಯ ಜಿಪಿಎ ದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು : ವಾದಿ ಪರ ಶ್ರೀಯುತ ಹೆಚ್.ಎಮ್. ವಕೀಲರಿಂದ.**

1. ನಾನು ಬಿ.ಎ. ಪದವಿದಾರನಾಗಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ವಿಶೇಷ ಮುಕ್ತಾರ್ ನಾಮೆಯ ಛಾಪಾ ಕಾಗದವನ್ನು ನಾಗರಾಜ್ ರವರು ಜನವರಿ 2026ರಲ್ಲಿ ಖರೀದಿಸಲಾಗಿರುತ್ತದೆ. ನಿಪಿ.2ನ್ನು ನಾನೇ ಬೆರಳಚ್ಚು ಮಾಡಿಸಿರುತ್ತೇನೆ. ನಿಡಿ.2ನ್ನು 1ನೇ ಪ್ರತಿವಾದಿಗೆ ಓದಿ ತಿಳಿಸಿರುತ್ತೇನೆ. ನಿಡಿ.2ಕ್ಕೆ ನಾಗರಾಜ್ ರವರು ನೋಟರಿ ಮುಂದೆ ಸಹಿ ಮಾಡಿರುತ್ತಾರೆ. ನಿಡಿ.2ರಲ್ಲಿರುವ ವಿಚಾರಗಳು 1ನೇ ಪ್ರತಿವಾದಿಗೆ ತಿಳಿದಿರುವುದಿಲ್ಲ ಮತ್ತು ನಾನು ಸುಳ್ಳು ಸಾಕ್ಷ್ಯ ನುಡಿಯುವ ಸಲುವಾಗಿ ನಿಡಿ.2ರಲ್ಲಿ 1ನೇ ಪ್ರತಿವಾದಿಯ ಸಹಿಯನ್ನು ಪಡೆದುಕೊಂಡು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ.2ರಲ್ಲಿ ಕಾಣಿಸಿರುವಂತೆ 1ನೇ ಪ್ರತಿವಾದಿಗೆ ಮೊಣಕಾಲಿನ ಸಮಸ್ಯೆ ಇದೆ ಎಂದು ತೋರಿಸುವ ಕುರಿತು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. 1ನೇ ಪ್ರತಿವಾದಿ ವಿಧಾನಪರಿಶತ್ ಸದಸ್ಯರು ಎಂದರೆ ಸರಿ. ದಿಃ 09.04.2023ರಂದು 1ನೇ ಪ್ರತಿವಾದಿಯು ರಾಜ್ಯ ಸಚಿವರು ಆಗಿದ್ದರು ಎಂದರೆ ಸರಿ. 1ನೇ ಪ್ರತಿವಾದಿಗೆ ಯಾವೆಲ್ಲಾ ಜಮೀನುಗಳು ಎಲ್ಲಿ ಇವೆ ಮತ್ತು ಸದರಿ ಜಮೀನುಗಳ ಕುರಿತು ಯಾವೆಲ್ಲಾ ಪ್ರಕರಣಗಳು ದಾಖಲಾಗಿವೆ ಎಂದು ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

2. 1ನೇ ಪ್ರತಿವಾದಿಗೆ ಯಾವುದೇ ಜಮೀನಿನ ಕುರಿತಾದ ವ್ಯವಹಾರಗಳು ತಿಳಿದಿರುವುದಿಲ್ಲ ಮತ್ತು ನಾನು ಸ್ವತಃ ಸದರಿ ವ್ಯವಹಾರಗಳನ್ನು ಮಾಡುತ್ತಿರುತ್ತೇನೆ ಎಂದರೆ ಸಾಕ್ಷಿಯು ವ್ಯವಹಾರಗಳು ತಿಳಿದಿರುತ್ತವೆ ಮತ್ತು ಅವರು ಸೂಚಿಸಿದಂತೆ ನಾನು ನಿರ್ವಹಿಸುತ್ತಿದ್ದೆನು ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಗೆ ಸಂಬಂಧಿಸಿದ ಜಮೀನುಗಳು ಹೊಸಕೋಟೆ ತಾಲೂಕಿನ ಹಲವು ಗ್ರಾಮಗಳಲ್ಲಿ ಮತ್ತು ಹೋಬಳಿಗಳಲ್ಲಿ ಇರುತ್ತವೆ ಎಂದರೆ ಸರಿ. ಸದರಿ 1ನೇ ಪ್ರತಿವಾದಿಗೆ ಸಂಬಂಧಸಿದ ಜಮೀನಿನ ಕುರಿತು ಯಾವುದಾದರೂ ತಕರಾರುಗಳು ಉಂಟಾದರೇ 1ನೇ ಪ್ರತಿವಾದಿ ಸ್ವತಃ ಮೊದಲು ಭೇಟಿ ನೀಡಿ ಪರಿಹರಿಸುತ್ತಾರೆ ಎಂದರೆ ಸರಿ. ಆ ರೀತಿ 1ನೇ ಪ್ರತಿವಾದಿಯ ಜಮೀನಿನ ಕುರಿತಾದ ತಕರಾರುಗಳು ಮೊದಲು ನನ್ನ ಗಮನಕ್ಕೆ ಬಂದ ನಂತರ ನಾನು 1ನೇ ಪ್ರತಿವಾದಿಗೆ ತಿಳಿಸಿದ ನಂತರ 1ನೇ ಪ್ರತಿವಾದಿಯು ನನಗೆ ಸದರಿ ತಕರಾರನ್ನು ಬಗೆಹರಿಸುವ ಸಲುವಾಗಿ ನನಗೆ ಅಧಿಕಾರವನ್ನು ನೀಡುತ್ತಾರೆ ಎಂದರೆ ಸರಿಯಲ್ಲ. ನಿಡಿ.2ನ್ನು ಸ್ವತಃ ನಾನೇ ತಯಾರಿಸಿ 1ನೇ ಪ್ರತಿವಾದಿಯ ಸಹಿಯನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ತಮ್ಮ ಜಮೀನಿನ ಕುರಿತಾದ ಯಾವುದೇ ವಿಚಾರಗಳು ತಿಳಿದಿರುವುದಿಲ್ಲ ಮತ್ತು ನಾನು ಸ್ವತಃ ಸದರಿ ಜಮೀನುಗಳ ವ್ಯಾಜ್ಯಾವನ್ನು ಉಂಟು ಮಾಡಿ ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1ನೇ ಪ್ರತಿವಾದಿಯ ಬಳಿ 35 ವರ್ಷಗಳಿಂದ ಕೆಲಸ ಮಾಡಿಕೊಂಡಿರುತ್ತೇನೆ.

3. 1ನೇ ಪ್ರತಿವಾದಿಯ ಜಮೀನುಗಳ ಕೆಲಸಕ್ಕೆ ಆಳುಗಳನ್ನು ಯಾರು ನೇಮಿಸುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು 1ನೇ ಪ್ರತಿವಾದಿ ನಿರ್ದೇಶನ ನೀಡಿದ ನಂತರ ನಾನು ಕೆಲಸದ ಆಳುಗಳನ್ನು ನಿಯೋಜಿಸುತ್ತೇನೆ ಎಂದು ನುಡಿಯುತ್ತಾರೆ. 1ನೇ

ಪ್ರತಿವಾದಿಯ ಜಮೀನುಗಳಿಗೆ ಕಾಂಪೌಂಡ್ ಬೇಲಿ ಮತ್ತು ಇನ್ನಿತರ ಕೆಲಸಗಳನ್ನು ಸ್ವತಃ ನಾನೇ ನಿರ್ವಹಿಸುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1ನೇ ಪ್ರತಿವಾದಿ ಸ್ವತಃ ನಿರ್ವಹಿಸುತ್ತಾರೆ ಎಂದು ನುಡಿಯುತ್ತಾರೆ. ನನಗೆ 1ನೇ ಪ್ರತಿವಾದಿಗೆ ಸಂಬಂಧಿಸಿದ ಜಮೀನುಗಳಲ್ಲಿ ಯಾವ ಕೆಲಸ ನಡೆಯುತ್ತಿದೆ ಎಂದು ಖುದ್ದಾಗಿ ತಿಳಿದಿರುತ್ತದೆ.

4. ದಿಃ 09.04.2023ರಂದು ನಾನು ಯಾವ ಕಛೇರಿಯಲ್ಲಿ ಯಾವ ಕೆಲಸ ಮಾಡುತ್ತಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ದಿನ 1ನೇ ಪ್ರತಿವಾದಿಯು ಎಲ್ಲಿ ಯಾವ ಕೆಲಸ ಮಾಡುತ್ತಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ದಿಃ 09.04.2023ರಂದು 1ನೇ ಪ್ರತಿವಾದಿಗೆ ಸಂಬಂಧಿಸಿದ ಯಾವೆಲ್ಲಾ ಜಮೀನಿನಲ್ಲಿ ಯಾವೆಲ್ಲಾ ಕೆಲಸಗಳು ನಡೆಯುತ್ತಿದ್ದವು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ನಾನು 1ನೇ ಪ್ರತಿವಾದಿಯ ಜಮೀನುಗಳಿಗೆ ಆಳುಗಳನ್ನು ಕೆಲಸ ನಿರ್ವಹಿಸಲು ನೇಮಿಸುತ್ತೇನೆ ಎಂದರೆ ಸರಿ. ದಿಃ 09.04.2023ರಂದು ನನ್ನ ಕೈ ಕೆಳಗೆ ನಿರ್ವಹಿಸುವ ಆಳುಗಳು ಯಾವೆಲ್ಲಾ ಜಮೀನಿನಲ್ಲಿ ಯಾವೆಲ್ಲಾ ಕಾಂಪೌಂಡ್ ಗೋಡೆಗಳನ್ನು ನಿರ್ಮಿಸುತ್ತಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ನಾವು ನಮ್ಮ ಜಮೀನಿನಲ್ಲಿ ಕಾಂಪೌಂಡ್ ಗೋಡೆ ನಿರ್ಮಿಸುವ ಕೆಲಸಗಾರರಿಗೆ ಪಡೆದುಕೊಂಡಿರುವ ಪರವಾನಿಗೆ ಕುರಿತು ಯಾವುದೇ ದಾಖಲೆಗಳನ್ನು ನೀಡುವುದಿಲ್ಲ.

**(ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.